ತಾರೀಖು 10ನೆ ಏಪ್ರಿಲ್ 1907.

ನಂ. 9362—ಮೆಡಿ. 270-06—3, ಶಿವನ ಸಮುದ್ರದಲ್ಲಿನ ಸಬ್ ಅಸಿಸ್ಟೆಂಟ್ ಸರ್ಜನ್ ಮಿ॥ ಟಿ. ಎಸ್. ಸಿದ್ದಪ್ಪನವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನಿನ 177ನೆ ಪ್ರಕರಣವನ್ನನುಸರಿಸಿ 1907ನೆ ಇಸವಿಯ ಮಾರ್ಚ್ 21ನೆ ತಾರೀಖಿನ ಅಪರಾಹ್ನದ ಲಾಗಾಯಿತು 15 ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 10ನೆ ಏಪ್ರಿಲ್ 1907.

ನಂ. 9381—ಎಡ್ಯು. 198-06—9, ಮೈಸೂರು ಸೀಮೆಯ ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್ ಜನರಲ್ ಮಿ॥ ಎಚ್. ಜೆ. ಖಾಖಾ ಯವರಿಗೆ, 1907ನೆ ಇಸವಿಯ ಜನವರಿ 16ನೆ ತಾರೀಖಿನ 6438—ಎಡ್ಯು. 198-06—3 ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ ಪ್ರಿವಿಲೇಜ್ ರಜೆಗೆ ಸೇರಿಸಿ 1907ನೆ ಇಸವಿಯ ಫೆಬ್ರವರಿ ತಿಂಗಳ ಕಡೆಯ ವರಗೆ ಕೊಟ್ಟಿದ್ದ ಫರ್ಲೋ ರಜಾವನ್ನು, ಮೊದಲೇ ಮಂಜೂರಾಗಿದ್ದ ಒದಲಿ ವಿರ್ಣಾಮುಗಳ ಮೇಲೆ, 1907ನೆ ಇಸವಿಯ ಮಾರ್ಚ್ 3ನೆ ತಾರೀಖಿನ ವರೆಗೆ (ಆ ದಿನವೂ ಸೇರಿ) ಪುನಃ ಹೆಚ್ಚಿಸಿದೆ.

ತಾರೀಖು 15ನೆ ಏಪ್ರಿಲ್ 1907.

ನಂ. 9573—Med. 41-06—10, ಕೂನೂರಲ್ಲಿರುವ ದಕ್ಷಿಣ ಇಂಡಿಯಾನ ಪ್ಯಾಸ್ಟರ್ ಇನ್‌ಸ್ಟಿಟ್ಯೂಟಿನ ಡೈರೆಕ್ಟರ ವರಿಂದ ಕೊಡಲ್ಪಟ್ಟ ಈ ಕೆಳಗೆ ಸಮೂಹಿಸುವ ನೋಟೀಸನ್ನು ಸಮಸ್ತರ ತಿಳಿವಳಿಕೆಯ ಬಗ್ಗೆ ಪುನಃ ಪ್ರಕಟಿಸಿ ಇದೆ :—

ನೋ ಟಿ ಸ್.

ಕೂನೂರಲ್ಲಿರುವ ದಕ್ಷಿಣ ಇಂಡಿಯಾನ ಪ್ಯಾಸ್ಟರ್ ಇನ್‌ಸ್ಟಿಟ್ಯೂಟ್ ಎಂಬ ಆಸ್ಪತ್ರೆಯು, ಹುಚ್ಚು ಪ್ರಾಣಿಗಳಿಂದ ಕಡಿಸಿಕೊಳ್ಳಲ್ಪಟ್ಟವರ ಚಿಕಿತ್ಸೆಗೋಸ್ಕರ, 1907ನೆ ಇಸವಿಯ ಏಪ್ರಿಲ್ ಒಂದನೆ ತಾರೀಖಿನ ಲಾಗಾಯಿತು ತೆರೆಯಲ್ಪಡುತ್ತದೆ.

ತಾರೀಖು 15ನೆ ಏಪ್ರಿಲ್ 1907.

ನಂ. 9572—Med. 247—06—5, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಬೇಲೂರಿನಲ್ಲಿ ಬಂದು ಹೊಸ ಡೆಡ್ ಹೌಸ್ ಮತ್ತು ಶವಪರೀಕ್ಷೆಯ ಮನೆಯನ್ನು ಕಟ್ಟುವುದಕ್ಕೋಸ್ಕರ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಸಕಲೇಶಪುರದ ಜಾರ್ಜಿನಲ್ಲಿರುವ ಸೀನಿಯರ್ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರಕೊಟ್ಟಿದೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು	ಸರ್ವೆ ನಂ.	ಖುಷ್ಕಿ, ತರಿ ಯಾ ಬಾಗಾಯ್ತು.	ಒಟ್ಟು ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ	ಚತುರ್ಗಡಿ.			
									ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಹಾಸನ.	ಬೇಲೂರು.	ಬೇಲೂರು.	ವೆಂಕಟರಾಯರ ಮಗ ಸುಬ್ಬು ರಾವ್.	177ರ ಭಾಗ	ಖುಷ್ಕಿ.	ಎ. ಗು. 4 8	ರೂ. ಅ. ಪೈ. 5 4	ಎಕ್ರೆ. ಚದರಗಜ. ಗುಂ. 12 40	ಸರ್ವೆ 171, 172 ಮತ್ತು 173ನೆ ನಂಬರುಗಳು.	ಸರ್ವೆ 176ನೆ ನಂಬರು ಮತ್ತು 177ನೆ ನಂಬರಿನ ಭಾಗ.	ಸರ್ವೆ 177ನೆ ನಂಬರಿನ ಭಾಗ.	ಸರ್ವೆ 5 ಮತ್ತು 175ನೆ ನಂಬರುಗಳು.

ತಾರೀಖು 15ನೆ ಏಪ್ರಿಲ್ 1907.

ನಂ. 9572—MI. 237-06—14, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೀರ್ಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಮೈಸೂರು ನಗರದ ಗಾಣಿಗರಿಗೆ ಎಣ್ಣೆ ತೆಗೆಯುವ ಬಗ್ಗೆ ಒಂದು ಸ್ಥಳ ಏರ್ಪಡಿಸಿಕೊಡುವುದಕ್ಕೋಸ್ಕರ ಅವ

ಕ್ಯೆಕವಾಗಿದೆ; ಮತ್ತು ಮೇಲ್ಕಂಡ ರಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಮೈಸೂರು ಸಬ್ ಡಿವಿಜ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕವಿಷನರಿಗೆ ಸದರೀ ಜವಿಾನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟ್	ತಾಲ್ಲೂಕು	ಹೋಬಳಿ	ಗ್ರಾಮ	ಖಾತೇದಾರರ ಹೆಸರು	ಸರ್ವೆ ನಂಬರು.	ಖುಷ್ಕಿ, ತರಿ ಯಾ ಬಾಗಾಯತ್	ಒಟ್ಟು ವಿಸ್ತೀರ್ಣ	ಕಂದಾಯ	ಈಗ ಸದ್ಯಕ್ಕೆ ಬೇಕಾಗಿರುವ ವಿಸ್ತೀರ್ಣ.		ಚತುರ್ಗಡಿ.			
									ವಿಸ್ತೀರ್ಣ	ಕಂದಾಯ	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
ಮೈಸೂರು	ಮೈಸೂರು	ಮೈಸೂರು	ನಾರಗೊಂಡನಹಳ್ಳಿ	ಹೊನ್ನೇಗೌಡ	192	ಖುಷ್ಕಿ	ಎ. ಗು. ಸಾ. 5-20	ರೂ. ಅ. ಪೈ. 5 8	ಎ. ಗು. ಸಾ. 5-20	ರೂ. ಅ. ಪೈ. 5 8	ಗಾಡಿ ದಾರಿ.	193ನೆ ಸರ್ವೆ ನಂಬರು	191ನೆ ಸರ್ವೆ ನಂಬರು	ರಸ್ತೆ.

ತಾರೀಖು 15ನೆ ಏಪ್ರೆಲ್ 1907.

ನಂ. 9574—Med. 4-06—38, ಈ ಕೆಳಗೆ ನಮೂದಿಸುವ ವೈದ್ಯ ಆಫಿಸರ ವರ್ಗವರ್ಗಿಗಳು 1907ನೆ ಇಸವಿಯ ಜುಲೈ ಗುರ್ತ ತಾರೀಖು ಲಾಗಾಯಿತು ಜಾರಿಯಲ್ಲಿ ಬರತಕ್ಕ ದ್ದೆಂತ ಹುಕುಂ ಆಗಿ ಇದೆ:—

ನಂಬರು	ದರ್ಜೆ.	ಹೆಸರು.	ಇಂದ.	ಗೆ.	ಷರಾ.
1	ಸಿವಿಲ್ ಸರ್ಜ್	ಮಿ॥ ಇ. ಎಸ್. ಕೃಷ್ಣಸ್ವಾಮಯ್ಯರ್, ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟೆರಿ ಆಫಿಸರು.	ವಿಕ್ಟೋರಿಯಾ ಆಸ್ಪತ್ರೆಯ ಗಂಡುಸರ ಮೆಡಿಕಲ್ ಡಿವಿಜ್ ಹೆಚ್ಚಿಗೆ ಚಾರ್ಜಿನ ಜತೆಯಲ್ಲಿ, ಬೆಂಗಳೂರು ಡಿಸ್ಟ್ರಿಕ್ಟ್.	ಮೈಸೂರು ಡಿಸ್ಟ್ರಿಕ್ಟ್ ಮತ್ತು ಜೈಲು ಮತ್ತು ಮಹಾರಾಣಿಯವರ ಆಸ್ಪತ್ರೆಯ ಸೂಪರ್‌ಟೆಂಡೆಂಟ್.	
2	ಡಿಟೋ...	ಮಿ॥ ಟಿ. ಎಸ್. ನಂಜಪ್ಪ, ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟೆರಿ ಆಫಿಸರು.	ಮೈಸೂರು ಡಿಸ್ಟ್ರಿಕ್ಟ್ ಮತ್ತು ಜೈಲು ಮತ್ತು ಮಹಾರಾಣಿಯವರ ಆಸ್ಪತ್ರೆಯ ಸೂಪರ್‌ಟೆಂಡೆಂಟ್.	ವಿಕ್ಟೋರಿಯಾ ಆಸ್ಪತ್ರೆಯ ಗಂಡುಸರ ಮೆಡಿಕಲ್ ಡಿವಿಜ್ ಹೆಚ್ಚಿಗೆ ಚಾರ್ಜಿನ ಜತೆಯಲ್ಲಿ, ಬೆಂಗಳೂರು ಡಿಸ್ಟ್ರಿಕ್ಟ್.	ಚಾರ್ಜ್ ಒಪ್ಪಿಸಿದ ನಂತರ ವರ್ಗಾಯಿಸಲ್ಪಟ್ಟ ಕೆಲಸದ ಮೇಲೆ ಹೋಗತಕ್ಕದ್ದು.

ತಾರೀಖು 20ನೆ ಮಾರ್ಚ್ 1907.

ನಂ. ಜೆ. 2915—ಲೆಜಿಸ್. 47—1906, ಸ॥ 1907ನೆ ಇಸವಿಯ 1ನೆ ರೆಗ್ಯುಲೇಷನಿನ 4ನೆ ಪ್ರಕರಣದ (2) ನೆ ಒಳ ಪ್ರಕರಣದ ಮೇರೆ ಈ ಕೆಳಗಿನ ನೊಡ್ಡ ಮನುಷ್ಯರನ್ನು ಮೈಸೂರು ನ್ಯಾಯ ವಿಧಾಯಕ ಸಭೆಯು (ಲೆಜಿಸ್ಲೆಟಿವ್ ಕೌನ್ಸಿಲ್) ಸಭಿಕರಾಗಿ ಮೊಕರರ್ರಾಮಡಲು ಶ್ರೀಮತ್ ಮಹಾರಾಜರವರ ಸರ್ಕಾರದವರು ಅಪ್ಪಣೆ ದಯಪಾಲಿಸಿರುತ್ತಾರೆ:—

ಸರ್ಕಾರಿ ಉದ್ಯೋಗಸ್ಥರಾದ ಸಭಿಕರು.

(1) ಮಿ॥ ರಂಗಸಾಮೈಯ್ಯಂಗಾರ್, ಬಿ. ಎ., ಬಿ. ಎಲ್., ರೆವಿನ್ಯೂ ಕವಿಷನರ್.
(2) ,, ಪಿ. ಎ. ಪೂರ್ಣಯ್ಯ, ಬಿ. ಎ., ಎಕ್ಸ್‌ಸೈಜ್ ಕವಿಷನರ್ ಮತ್ತು ರಿಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲ್.
(3) ,, ಎಚ್. ಜೆ. ಭಾಭಾ, ಎಂ. ಎ., ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್ ಜನರಲ್.
(4) ,, ಕೆ. ಎಸ್. ಚಯ್ಯಶೇಖರ ಐಯ್ಯರ್, ಬಿ. ಎ., ಬಿ. ಎಲ್., ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರಟೆರಿ.
(5) ,, ಎಂ. ಕಾಂತರಾಜ ಅರಸು, ಬಿ. ಎ., ಡೆಪ್ಯುಟಿ ಕವಿಷನರ್.
(6) ,, ಎಸ್. ನಾರಾಯಣರಾವ್, ಗವರ್ನಮೆಂಟ್ ಅಡ್ವೊಕೇಟ್.

ಸರ್ಕಾರಿ-ಉದ್ಯೋಗಸ್ಥರಲ್ಲದ ಸಭಿಕರು.

(1) ರಾಜಪರ್ಮಪ್ರವೀಣ, ಮಿ॥ ಟಿ. ಆರ್. ಎ. ತಂಬಚೆಟ್ಟಿ, ಸಿ. ಐ. ಇ.
(2) ರಾಜ ಮಂತ್ರ ಪ್ರವೀಣ ಮಿ॥ ಸಿ. ಶ್ರೀನಿವಾಸೈಯ್ಯಂಗಾರ್.
(3) ಮಿ॥ ಎಂ. ಸಿ. ರಂಗೈಯ್ಯಂಗಾರ್, ಬಿ. ಎ., ಅಡ್ವೊಕೇಟ್, ಮೈಸೂರು.
(4) ,, ಬಿ. ನಾಗಪ್ಪ, ಬ್ಯಾರಿಸ್ಟರ್ ಅಟ್ ಲಾ, ಬೆಂಗಳೂರು.